International Journal of Kannada Research
www.kannadajournal.com

ISSN: 2454–5813
IJSR 2017; 3(1): 110-111
© 2017 IJKS
www.kannadajournal.com
Received: 21-11-2016
Accepted: 22-12-2016

**ಸಂಶೋಧನಾ ವಿದ್ಯಾರ್ಥಿ**
ಅನುಪಮಾ ಸಿ. ಉತ್ನಾಳ,
ರಾ.ಚ.ವಿ.ಬೆಳಗಾವಿ, ಕರ್ನಾಟಕ

**ಮಾರ್ಗದರ್ಶಕರು**
ಡಾ. ಅಶೋಕ ನರೋಡೆ

**Correspondence**
**ಸಂಶೋಧನಾ ವಿದ್ಯಾರ್ಥಿ**
ಅನುಪಮಾ ಸಿ. ಉತ್ನಾಳ,
ರಾ.ಚ.ವಿ.ಬೆಳಗಾವಿ, ಕರ್ನಾಟಕ

# ಶಾಂತಿ ಅವಧೂತ ಬುದ್ಧ

**ಅನುಪಮಾ ಸಿ. ಉತ್ನಾಳ,ಸಂಶೋಧನಾ ವಿದ್ಯಾರ್ಥಿ, ಡಾ. ಅಶೋಕ ನರೋಡೆ,ಮಾರ್ಗದರ್ಶಕರು**

## ಪ್ರಸ್ಥಾವನೆ

ಬುದ್ಧ ಕೇವಲ ಒಂದು ಕಾಲದ, ಒಂದು ಸಮಯದ ಸೃಷ್ಠಿ ಮಾತ್ರವಲ್ಲ. ಅವತಾರ ಪುರುಷರಾದ ರಾಮ, ಕೃಷ್ಣ, ಏಸು, ಪೈಗಂಬರರಂತೆ ಅವನು ಸಹ ಮಹಾಕಾಲಗಳ ಒಂದು ಆವಿರ್ಭಾವ ಬುದ್ಧ ಜಗತ್ತಿನ ಮಹಾ ಸಂಕಲ್ಪಗಳ ಪ್ರಕಟಿತ ರೂಪ. ಎಲ್ಲ ಮಾನವೀಯ ಗುಣಗಳ ಘನೀಕೃತ ಅನರ್ಘ್ಯ ರತ್ನ. ಅಂತೆಯೆ ಅಜ್ಞಾನದ ಇರುಳ ಕವಿದ ನಮ್ಮ ಅಂತಃಚಕ್ಷುವನ್ನು ತೆರೆದು ಜೀವನ ದೃಷ್ಠಿಯನ್ನು ಬೆಳಗುವ ಬುದ್ಧನ ಶಾಂತಿ ವಿಚಾರಗಳು ಈಗಿನ ಕಾಲಕ್ಕೆ ದಾರಿದೀಪವಾಗಿವೆ.

## ಉದ್ದೇಶ

ಸತ್ಯನಿಷ್ಠ ವಿಚಾರವಾದಿ ಹಾಗೂ ಕರುಣಾ ಮೂರ್ತಿ ಮಾನವತಾವಾದಿ ಆ ಬುದ್ಧ. ಶರಣತ್ರಯ, ಪಂಚಶೀಲ, ಸತ್ಯಚತುಷ್ಠಯ ಮತ್ತು ಅಷ್ಟಾಂಗಮಾರ್ಗಗಳ ಮೂಲಕ ಭೇದರಹಿತ ಸರ್ವೋದಯ ಸಮಾಜವನ್ನು ನಿರ್ಮಿಸಿದ ಪರಮತಸಹಿಷ್ಣು ಗೌತಮ ಬುದ್ಧ. ತಾನು ಕಂಡ ಜ್ಞಾನದ ಬೆಳಕನ್ನು, ಸತ್ಯದರ್ಶನವನ್ನು, ಧಾರ್ಮಿಕ ಸಿದ್ಧಾಂತಗಳನ್ನು ಲೋಕ ಕಲ್ಯಾಣಾರ್ಥವಾಗಿ ಜನ ಹೃದಯದಲ್ಲಿ ಬಿತ್ತಲು ಪರಿವ್ರಾಜಕನಾದ ಜಗತ್ತಿನ ಪ್ರಪ್ರಥಮ ಧರ್ಮಚಕ್ರ ಪ್ರವರ್ತಕನವನು. ಲೋಕದ ಕ್ಷಣಿಕತೆ ಹಾಗೂ ಅನಿತ್ಯತೆಗಳನ್ನು ಬೋಧಿಸುತ್ತಲೇ ಪ್ರೀತಿ, ಮೈತ್ರಿ, ಅನುಕಂಪ, ತ್ಯಾಗ, ಶಾಂತಿ ಮುಂತಾದ ಮಾನವೀಯ ಮೌಲ್ಯಗಳ ಚಿರಂತನತೆಯನ್ನು ಪ್ರತಿಪಾದಿಸಿದ ಬುದ್ಧ ಲೋಕದ ಶ್ರೇಷ್ಠ ಆದರ್ಶಗಳ ಸಾಕಾರ ರೂಪನಾಗಿದ್ದಾನೆ. ಜಾತಿ, ಮತ, ವರ್ಗ, ವರ್ಣ ಮೊದಲಾದ ಮಾನವ ನಿರ್ಮಿತ ಸಂಕಲೆಗಳನ್ನು ಮುರಿದೊಗೆದು, ಸಮಸ್ತ ಮನುಕುಲ ನಿರ್ವಾಣದ ದಾರಿಯನ್ನು ತೋರುವ ಉದ್ದೇಶವಾಗಿತ್ತು. ಜಗತ್ತಿನ ಎಲ್ಲ ಗೊಂದಲ, ತಳಮಳ ಹಾಗೂ ಸಂಘರ್ಷಗಳ ನಡುವೆಯೆ ಶಾಂತಿಯನ್ನು ಭಿತ್ತಿದ, ಲೋಕೊತ್ತರವನ್ನು ಸಾಧಿಸಿದ ಮಹಾಪುರುಷ ಗೌತಮ ಬುದ್ಧ.

ಬುದ್ಧನ ಶಾಂತಿ ಮಂತ್ರಗಳು ಎಲ್ಲೆಡೆ ಪಸರಿಸಲು, ಧರ್ಮವೆಂದರೆ ಶಿಸ್ತು ನಿಯಮಗಳನ್ನು ಒಳಗೊಂಡು ಬಾಳುವುದು; ನಡೆಸುತ್ತದೆ ಅದು ಒಂದುಗೂಡಿಸುತ ಇಡೀ ವಿಶ್ವವನು ಅಸದೃಶವಾಗಿ ಧರ್ಮವೆಂದರೆ ನ್ಯಾಯ, ಸರ್ವರಿಗೂ ಸಮವೆನ್ನುವ ಭಾವ ಮೇಲು, ಕೀಳು ಉಚ್ಚ, ನೀಚವೆನುವ ತಾರತಮ್ಯ ಇಲ್ಲ ಧರ್ಮವೆಂದರೇ ಚಿರಂತನ ಸತ್ಯದಾ ಹಾದಿ ಇಂತಹ ಧರ್ಮ ತಿಳಿದು ನಡೆಯಬೇಕಾಗಿದೆ. ಆಗುತ್ತಿರುವುದೇನು? ಧರ್ಮದ ಹೆಸರಿನಲ್ಲಿ ರಾಜಕೀಯ ನಡೆಯುತ್ತಿದೆ. ಧರ್ಮಕ್ಕೆನೇ ಕಳಂಕ ಅಂಟಿಸಿ ಬಿಟ್ಟಿದ್ದಾರೆ ಧರ್ಮಕ್ಕೆ ಇರುವ ಒಳ್ಳೆಯ ಮುಖಗಳನ್ನು ಮುಚ್ಚಿ ಹಾಕಿದ್ದಾರೆ. ಅಂದು ಬುದ್ಧ ಅರುಹಿದ ಹಿತ ವಚನಗಳನ್ನು ಇಂದು ನಾವು ಅನುಸರಿಸದೆ ಅಂಧರಾಗಿ ಕಿವುಡರಾಗಿ ಇದು ನಮಗೆ ಸಂಬಂಧವಿಲ್ಲದೆ ಬದುಕು ನಡೆಸಿದ್ದೇವೆ. ಸಾವಿನ ಬಗ್ಗೆ ಬುದ್ಧ 'ಕಿಸಾಗೌತಮಿ'ಯ ಮೂಲಕ ಜಗತ್ತಿಗೆ ದೊಡ್ಡ ಸಂದೇಶ ನೀಡಿದ. ಮಡಿದ ಮಗುವನ್ನು ಬದುಕಿಸಿಕೊಡಿ ಎಂದು ಬುದ್ಧನ ಹತ್ತಿರ ಬಂದ ಕಿಸಾಗೌತಮಿ "ಸಾವಿರದ ಮನೆಯಿಂದ ಹಿಡಿ ಸಾಸಿವೆಯನು ತಾ ನೀನು ಸಾಕು" ಬದುಕಿಸುವೆ ಎನಲು ಇಷ್ಟು ದೊಡ್ಡ ಶೋಕಕ್ಕೆ ಇಷ್ಟು ಸಣ್ಣ ವಸ್ತು ಸಾಕೆ ಎಂದು ಎಲ್ಲರ ಮನೆಯಲ್ಲೂ ಬೇಡಿದಳು. "ಜನಿಸಿದವರೆಲ್ಲ ಮರಣಿಸಲೇ ಬೇಕು ಕೊನೆಗೆ! ಜನನ ವೃಕ್ಷಕೆ ಮರಣವೇ ಫಲವು" ಈ ನಿಜ ಸಂಗತಿಯನ್ನು ಅರಿತಳು. ಹುಟ್ಟು ನಮ್ಮ ಕೈಯಲ್ಲಿ ಇಲ್ಲವೋ ಹಾಗೆ ಸಾವು ಕೂಡ ಎರಡನ್ನು ನಾವು ಸಮನಾಗಿ ಕಾಣಬೇಕು. ಬುದ್ಧನು ಎಲ್ಲರ ಕಣ್ಣಿಗೆ ಕಟ್ಟಿದ ಪಟ್ಟಿಯನ್ನು ಸರಿಸುತ್ತ ಜ್ಞಾನದ ಬೆಳಪ್ರಾಚೀನ ಭಾರತದಲ್ಲಿ ನವಮನ್ವಂತರವೇ ಉಂಟಾಯಿತು. ಬುದ್ಧನ ತತ್ವಗಳು ಸರ್ವರನ್ನು ಆಕರ್ಷಿಸಿದವು. ಬುದ್ಧನ ತ್ರಿಪಿಟಕ, ಅಷ್ಟಾಂಗ ಮಾರ್ಗಗಳು ಸರ್ವರನ್ನು ಸೂರೆಗೊಂಡವು. ಹೀಗಾಗಿ ಬೌದ್ಧ ಧರ್ಮ ಬಹುಬೇಗ

ಜನ ಮನ್ನಣೆ ಗಳಿಸಿತು. ಮೌರ್ಯ ಸಾಮ್ರಾಟ ಅಶೋಕ ಚಕ್ರವರ್ತಿಯಂತವರ ಬೆಂಬಲದಿಂದಾಗಿ ಭಾರತೀಯ ಧರ್ಮವಾಗಿ ಪ್ರಸಾರಗೊಂಡಿತು. ಮನುಷ್ಯ ಕೌರ್ಯ, ಮೋಸ, ಒಳ್ಳೆತನ ಹೆಸರಿನಲ್ಲಿ ವಂಚನೆ, ಕಾಮುಕ ದೃಷ್ಟಿ ಇದರಲ್ಲಿಯೇ ದಿನ ಕಳೆಯುತ್ತಿದ್ದಾನೆ ಯುವ ಜನತೆ ಅಧೋಗತಿಗೆ ಇಳಿದಿದ್ದಾರೆ. ಬುದ್ಧನ ಶಾಂತಿ ವಿಚಾರಗಳು ಜೀವನವನ್ನು ಸುಂದರವಾಗಿ ಕಟ್ಟಿಕೊಡುವಲ್ಲಿ ಸಹಾಯಕವಾಗಿ ನಿಲ್ಲುತ್ತವೆ.

**ಸಮಾರೋಪ**

ಸರ್ವಸಮಾನತೆಯಿಂದ ಅಂತರಾಳದ ಪ್ರೀತಿ ಸದ್ಭಾವನೆಗಳಿಂದ ಪ್ರತಿಯೊಬ್ಬರ ಉದ್ಧಾರ ಎಲ್ಲರೆಲ್ಲರ ಉದ್ಧಾರ; ಎಲ್ಲದರ ಉದ್ಧಾರವೇ ಸರ್ವೋದಯದ ತತ್ವ ಸಾರ. ಭಗವಾನ ಬುದ್ಧ ಸರ್ವೋದಯ ಮಾರ್ಗದ ಮಹಾನ್ ಸಾಧಕ. ಕ್ರೌರ್ಯದ ವಿಜೃಂಭಣೆ ತಾತ್ಕಾಲಿಕ, ಶಾಂತಿ ಸೌಹಾರ್ದತೆಗೆ ಅಂತಿಮ ಗೆಲುವಾಗುವುದು. ಸತ್ಯಕ್ಕೆ ಸನ್ಮಾರ್ಗಕ್ಕೆ ಅಡ್ಡಿ ಆಪತ್ತು ಬಹಳ ಕೊನೆಗೆ ಅದೇ ದಡ ಮುಟ್ಟಿಸುತ್ತವೆ. ವ್ಯಕ್ತಿಯ, ಶ್ರದ್ಧೆ, ನಿಷ್ಟೆ, ಮುಖ್ಯ ಮಾನವೀಯ ಅಂತಃಕರಣ ಸರ್ವ ಜೀವಗಳ ಸಂರಕ್ಷಣೆ ಮಹತ್ವದಾಗಿದೆ. ಈ ಭೂಮಿಯಲ್ಲಿ ಸರ್ವರೂ ಬಾಳಬೇಕು. ಸನ್ಮಾರ್ಗದಲ್ಲಿ ನಡೆಯಬೇಕು. ದ್ವೇಷ–ಈರ್ಷೆ ತ್ಯಜಿಸಬೇಕು ಮುಂತಾದ ಮಾನವಿಯ ಮೌಲ್ಯಗಳ ಗಣಿಯಾಗಿದೆ.

**ಆಧಾರ ಗ್ರಂಥಗಳು**

೧. ಬುದ್ಧ ಮಹಾದರ್ಶನ– ಡಾ. ಲತಾ ರಾಜಶೇಖರ.

೨. ಮಹಾರಾತ್ರಿ (ನಾಟಕ) – ಕುವೆಂಪು

೩. Gautam Buddha: The life and teachings of the Awakened one(English) - Vishvapani BlomfieldÀ